ಮೈಸೂರ ಗೆಜೆಟ್.

ನಂ. 8 ಸರ್ಕಾರದಿಂದ ಫಾಯಿಸ್ ಆದ್ದು. ಸ್ಕ್ 1885.

ಬೆಂಗಳೂರು, ಶನಿವಾರ, ಫಿಬ್ರವರಿ ತಾ|| 21, ಸ್ಕ್ 1885.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ಟೆಂಡೆಂಟರು, ಕಾಂಟ್ರೋಲರವರು, ಪಬ್ಲಿಕ್ ವರ್ಕಿಸ್ತು ಆಫೀಸರ್‌ಗಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ಷ ಜಡ್ಜೀರು, ಡಿ|| ಡೆಪ್ಯುಟೆ ಕಮ್ಮಿಷನರುಗಳು, ಸಬ್ಬಾರ್ಡಿನೇಟ್ ಜಡ್ಜೀರು, ಪೋಲೀಸ್‌ಸೂಪರ್ಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷಣಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 24ನೇ ಜನವರೀ 1885.

ನಂ. 215.–ಲೇಟ್ ಚೀಫ್ ಕಮ್ಮಿಷನರವರಿಂದ ಕೊಡಲ್ಪಟ್ಟ, ಬಾಜೂದಲ್ಲಿ ಕಂಡ ಇಸ್ತಿಹಾರ್‌ನಾಮೆಗಳಲ್ಲಿ ಅಡಗಿದ ಹುಕ್ಕುಂಗಳನ್ನು ರದ್ದುಪಡಿಸಿ ಅಸಿಸ್ಟೆಂಟ್ ಕಮ್ಮಿಷನರುಗಳು, ಮುಖಿಕರುಗಳು, ಅಮಲ್ದಾರ್ ವ ಡೆಪ್ಯುಟೆ ಅಮಲ್ದಾರ್‌ಗಳು, ಯಿವರುಗಳ ಮೊಕರರಾತಿಗೋಸ್ಕರ ಪರೀಕ್ಷೆಗಳನ್ನು ವಿಧಿಸುವ ಇದರಡಿ ಕಂಡ ನಿಬಂಧನೆಗಳು ಶ್ರೀಮ್ ಮಹಾರಾಜಾ ಸರ್ಕಾರದವರ ಮಂಜೂರಾತಿಯಿಂದ ಸರ್ವರ ತಿಳುವಳಿಕೆ ಬಗ್ಗೆ ಇದರಿಂದ ಪ್ರಕಟಿಸಲ್ಪಡುತ್ತೆ.

1871ನೇ ಇಸವಿ ಜೂ 24ನೇ ಮುಕ್ತುಂ ನಂಬರ್ 121.

1878ನೇ ಅಕ್ಟೋಬರ್ 23ನೇ ಮಾ| ನಂ. 175.

ಜುಡಿಷಲ್ ಕಮ್ಮಿಷನರವರಿಗೆ ಬರೆದ 1874ನೇ ಇಸವಿ ಮಾರ್ಚಿ 14ನೇ ಮುಕ್ತುಂ ನಂ. 6767—160ನೇ ಡಾಕೆಟ್.

2. ಇದರಡೀ ಕಂಡ ಪರೀಕ್ಷೆಗಳು ಇದರ ಕೆಳಗೆ ಕಾಣಿಸಿರುವ ವಿಷಯಗಳಲ್ಲಿ ಸಾಲಿಯಾನಾ ನಡಿಸಲ್ಪಡುವವು.

(ಎ.) ರೆವಿನ್ಯೂ ಪರೀಕ್ಷೆ.

1.	ಮೈಸೂರು ಶೀಮೆಯಲ್ಲಿ ಜಾರಿ ಇರುವ ರೆವಿನ್ಯೂರೂಲ್ಸ್	.. ರೆವಿನ್ಯೂ ಮ್ಯಾನ್ಯುಎಲ್.
2.	ಸರ್ವೆ ವ ಸೆಟಲ್‌ಮೆಂಟ್ ರೂಲಸು ಮತ್ತು ಗ್ರಾಮ ಲೆಕ್ಕಗಳ ನಮೂನೆ. ..	.. ಸರ್ವೇ ಮ್ಯಾನ್ಯುಎಲ್.

3.	ಫಾರೆಸ್ಟ್ ಕರ್ಣಸರ್ವೇಶನ್ ರೂಲ್ಸು	..	.. .. ..
4.	ಸ್ಟ್ಯಾಂಪ್ ನಿಬಂಧನೆ.	..	1879ನೇ ಇಸವಿ 1ನೇ ನಂಬರ್ ಜನರಲ್ ಸ್ಟ್ಯಾಂಪು ಆಕ್ಟು ಮತ್ತು 1870ನೇ ಇಸವಿ VIIನೇ ನಂಬರ್ ಕೋರ್ಟು ಫೀಜ್ ಆಕ್ಟು ಮತ್ತು ಅವುಗಳನುಸಾರವಾದ ರೂಲ್ಸ್.
5.	ಲ್ಯಾಂಡ್ ಅಕ್ವಿಜಿಶ್ಯನ್ ಆಕ್ಟು.	..	1870ನೇ ಇಸವಿ Xನೇ ನಂಬರ್ ಆಕ್ಟು.
6.	ತೊಂಡು ಜಾನವಾರ್ ಆಕ್ಟು	..	1871ನೇ ಇಸವಿ Iನೇ ನಂಬರ್ ಆಕ್ಟು.
7.	ರಿಜಿಸ್ಟ್ರೇಶನ್ ಆಕ್ಟು	..	1879ನೇ ಇಸವಿ XIIನೇ ನಂಬರ್ ಆಕ್ಟಿನಿಂದ ತಿದ್ದುಪಡಿಯಾದ ವೇರೆ 1877ನೇ ಇಸವಿ IIIನೇ ನಂಬರ್ ಆಕ್ಟು ಮತ್ತು ಅವುಗಳನುಸಾರವಾದ ರೂಲ್ಸ್.
8.	ಎಕ್ಸೈಸ್‌ಯಾನೆ ಅಬಕಾರಿ ಆಕ್ಟು	..	1871ನೇ ಇಸವಿ Xನೇ ನಂಬರ್ ಆಕ್ಟು ಮತ್ತು ಅದಕ್ಕನುಸಾರವಾದ ರೂಲ್ಸ್.
9.	ಅಫೀಂ ಆಕ್ಟು ..	..	1878ನೇ ಇಸವಿ Iನೇ ನಂಬರ್ ಆಕ್ಟು ವ ಅದಕ್ಕನುಸಾರವಾದ ರೂಲ್ಸ್.
10.	ಆಡಿಟ್ ವ ಅಕೌಂಟ್ ಇಲಾಖಾ ಸರಕಿಲುಗಳು ಮತ್ತು ಫೈನಾನ್ಶಿಯಲ್ ಕೋಡುಗಳು.		

(ಬಿ.) ಸಿವಿಲ್ ಪರಿಕ್ಷೆ.

1.	ಸಾಕ್ಷ್ಯ ಸಂಗ್ರಹ	..	1872ನೇ ಇಸವಿ Iನೇ ನಂಬರ್ ಆಕ್ಟು.
2.	ಮೋರ್ಟ್‌ಗೇಜ್ ಯಾನೆ ಅಡಮಾನ.		ಮೋರ್ಟಗೇಜ್ ವಿಷಯದಲ್ಲಿ ಮೆಕ್‌ಫರರ್ಸ್ ಯವರು ಬರೆದಿರುವ ಪುಸ್ತುಕ ಮತ್ತು 1882ನೇ ಇಸವಿ IVನೇ ನಂಬರ್ ಆಕ್ಟು.
3.	ಹಿಂದೂಲಾ ..	..	ಮೇಕ್ಸ್ ಹಿಂದೂಲಾ ಮತ್ತು ಯುಸೇಜ್ ಯಾನೆ ಪದ್ಧತಿ.
4.	ಮಹಮ್ಮದ್ದ ಲಾ ..	..	ಷಡಗೋಪಾಚಾರಲು ಯವರ ಮ್ಯಾನ್ಯುಎಲ್.
5.	ಲಾ ಆಫ್ ಟೊರಟಸ್ ..	..	ಕಾಲೆಟ್‌ಸ್ ಆ್ಯ ಟೊರಟಸ್ ಯಂಬ ಪುಸ್ತುಕ.
6.	ಕಂಟ್ರಾಕ್ಟು ಕಾನೂನು	..	1872ನೇ ಇಸವಿ IXನೇ ನಂಬರ್ ಆಕ್ಟು.
7.	ಸ್ಪೆಸಿಫಿಕ್ ರೆಲೀಫ್ ಆಕ್ಟು	..	1877ನೇ ಇಸವಿ Iನೇ ನಂಬರ್ ಆಕ್ಟು.
8.	ಲಾ ಆಫ್ ಲಿಮಿಟೇಶನ್	..	1877ನೇ ಇಸವಿ XVನೇ ನಂಬರ್ ಆಕ್ಟು, 1879ನೇ ಇಸವಿ XIIನೇ ನಂಬರ್ ಆಕ್ಟು, 1880ನೇ ಇಸವಿ VIIIನೇ ನಂ. ಆಕ್ಟು.
9.	ಸಿವಿಲ್ ಪ್ರೊಸಿಜ್ಯೂರ್ ಕೋಡ್	..	1884ನೇ ಇಸವಿ IIನೇ ನಂಬರ್ ಮೈಸೂರು ರೆಗ್ಯೂಲೇಶನ್‌ನಿಂದ ತಿದ್ದುಪಡಿಯಾದ ಪ್ರಕಾರ 1882ನೇ ಇಸವಿ XIVನೇ ನಂ. ಆಕ್ಟು.

(ಸಿ.) ಕ್ರಿಮಿನಲ್ ಪರಿಕ್ಷೆ.

1. ಇಂಡಿಯನ್ ಪೆನಲ್‌ಕೋಡು.
2. ಕ್ರಿಮಿನಲ್ ಪ್ರೊಸಿಜ್ಯೂರ್‌ಕೋಡು.
3. ಲಾ ಆಫ್ ಯವಿಡೆನ್ಸು. 1872ನೇ ಇಸವಿ Iನೇ ನಂಬರ್ ಆಕ್ಟು.
4. ಪೋಲೀಸ್ ರೂಲ್ಸ್.

3. ಪರೀಕ್ಷೆಗಳು, ಗವರ್ನಮೆಂಟಿನವರಿಂದ ಆಗಿಂದಾಗ್ಯೆ ಗೊತ್ತು ಮಾಡಲ್ಪಡುವ ತಾರೀಖುಗಳಲ್ಲೂ ಸ್ಥಳಗಳಲ್ಲೂ ನಡಿಸಲ್ಪಡುವವು.

4. ಪರೀಕ್ಷೆಗಳು, ಪರೀಕ್ಷೆಕೊಡುವವರ ಇಷ್ಟಾನುಸಾರ ಇಂಗ್ಲಿಷಿನಲ್ಲಾಗಲಿ ಕನಡದಲ್ಲಾಗಲಿ ನಡಿಸಲ್ಪಡುವವು.

5. ಪ್ರತಿ ವಿಷಯದಲ್ಲೂ, ಮೂರು ಭಾಗದಲ್ಲಿ ಒಂದು ಭಾಗಕ್ಕೆ ಕಮ್ಮಿ ಇಲ್ಲದಂತೆಯೂ, ಪ್ರತಿ ಒಂದು ಪರೀಕ್ಷೆಯ ವಟ್ಟು ನಂಬರ್ ಪೈಕಿ 5ರಲ್ಲಿ 2 ಭಾಗಕ್ಕೆ ಕಮ್ಮಿ ಇಲ್ಲದಂತೆಯೂ, ನಂಬರುಪಡೆಯುವ ಯಲ್ಲ ಉಮೇದವಾರರೂ ಪರೀಕ್ಷೆಯಲ್ಲಿ ತೇರ್ಗಡೆಯಾದಂತೆ ತಿಳಿಸಲ್ಪಡುವರು.

6. ಮೇಲೆ ವಿಧಿಸಲ್ಪಟ್ಟ ರೆವಿನ್ಯೂ, ಸಿವಿಲ್ ವ ಕ್ರಿಮಿನಲ್ ಪರೀಕ್ಷೆಯಲ್ಲಿ ತೇರ್ಗಡೆಯೊಗದ ಯಾವ ಮನುಷ್ಯನಾಗಲಿ ಅಸಿಸ್ಟೆಂಟ್ ಕಮ್ಮಿಷನರಾಗಿ ಮೊಕರರ್ಮಾಡಲ್ಪಡುವ ಬಗ್ಯೆ ಅರ್ಹನಾಗಿರುವದಿಲ್ಲವು.

ಸಿವಿಲ್ ವ ಕ್ರಿಮಿನಲ್ ಪರೀಕ್ಷೆಗಳಲ್ಲಿ ತೇರ್ಗಡೆಯಾಗದ ಯಾವ ಮನುಷ್ಯನೂ, ಮುನ್ಸಿಫರಾಗಿ ಮೊಕರರ್ಮಾಡಲ್ಪಡುವ ಬಗ್ಯೆ ಅರ್ಹನಾಗಿರತಕ್ಕದ್ದಲ್ಲವು.

ರವಿನ್ಯೂ ವ ಕ್ರಿಮಿನಲ್ ಪರೀಕ್ಷೆಗಳಲ್ಲಿ ತೇರ್ಗಡೆಯಾಗದ ಯಾವ ಮನುಷ್ಯನೂ, ಅಮಲ್ದಾರ್ ಯಾ ಡಿಪ್ಯುಟಿ ಅಮಲ್ದಾರನಾಗಿ ಮೊಕರ್ರಾಮಡಲ್ಪಡುವ ಬಗ್ಯೆ ಅರ್ಜನಾಗಿರತಕ್ಕದ್ದಲ್ಲವು.

7. ಇಂಡ್ಯದೇಶದ ಯಾವದಾವರು ಯುನಿವರ್ಸಿಟಿಯಲ್ಲಿ ವಿಧಿಸಲ್ಪಟ್ಟ ಬ್ಯಾಚಿಲರ್ ಆಫ್ ಲಾಸ್‌ಯಂಬ ಪರೀಕ್ಷೆಯಲ್ಲಿ ತೇರ್ಗಡೆಯಾದವರೂ, ಅಥವಾ ಮದರಾಸ್ ಹೈ ಕೋರ್ಟಿನವರಿಂದಲಾಗಲಿ ಮೈಸೂರು ಚೀಫ್ ಕೋರ್ಟಿನವರಿಂದಲಾಗಲಿ 1ನೇ ಗ್ರೇಡ್ ಪ್ಲೀಡರುಗಳಿಗೆ ವಿಧಿಸಲ್ಪಟ್ಟ ಪರೀಕ್ಷೆಯಲ್ಲಿ ತೇರ್ಗಡೆಯಾದವರೂ, ಸಿವಿಲ್ ವ ಕ್ರಿಮಿನಲ್ ಪರೀಕ್ಷೆಯನ್ನು ಕೊಡುವದರಿಂದ ವಿನಾಯಿಸಲ್ಪಟ್ಟಿರುತ್ತಾರೆ.

8. ಮದರಾಸ್ ಸ್ಪೆಷಲ್ ಟೆಸ್ಟ್ ಸಿವಿಲ್ ಹೈಯರ್ ಗ್ರೇಡ್ ಪರೀಕ್ಷೆಯಲ್ಲಿ ತೇರ್ಗಡೆಯಾದವರು ಸಿವಿಲ್ ಪರೀಕ್ಷೆ ಕೊಡುವದರಿಂದಲೂ, ಮತ್ತು ಮದರಾಸ್ ಸ್ಪೆಷಲ್ ಟೆಸ್ಟ್ ಕ್ರಿಮಿನಲ್ ಹೈಯ್ಯರ್ ಗ್ರೇಡ್ ಪರೀಕ್ಷೆಯಲ್ಲಿ ತೇರ್ಗಡೆಯಾದವರು ಕ್ರಿಮಿನಲ್ ಪರೀಕ್ಷೆಕೊಡುವದರಿಂದಲೂ ವಿನಾಯಿಸಲ್ಪಡತಕ್ಕದ್ದು. ಈ ರೂಲ್‌ನಿಂದ ವಿಧಿಸಲ್ಪಟ್ಟ ವಿನಾಯಿತಿಯು, 1886ನೇ ಇಸವಿ ಡಿಸೆಂಬರ್ 31ನೇ ಮಟ್ಟಿಗಿನ ತರುವಾಯ ಆಬ್ಸೈರಾಗತಕ್ಕದ್ದು.

1871ನೇ ಇಸವಿ ಜೂನ್ 24ನೇ ಮುಕ್ತಂ ನಂಬರ್ 121.

9. ಲೇಟ್ ಚೀಫ್ ಕಮ್ಮಿಷನರವರಿಂದ ಕೊಡಲ್ಪಟ್ಟ್ಯ, ಬಾಜೂದಲ್ಲಿ ಕಂಡ ಇಸ್ತಿಹಾರ್‌ನಾಮೆಗಳಲ್ಲಿ ವಿಧಿಸಲ್ಪಟ್ಟ ಪರೀಕ್ಷೆಗಳಲ್ಲಿ ತೇರ್ಗಡೆಯಾಗದ ಆಬ್ಸೈರ್ ದರ್ಜೆಯ ಯಾವ ಅಸಿಸ್ಟೆಂಟ್ ಕಮ್ಮಿಷನರ್, ಮ್ಯುನೀಫ್ ಯಾ ಅಮಲ್ದಾರರೇ ಆಗಲೀ, ಮೇಲ್ಕಂಡ 2ನೇ ಪ್ಯಾರಾದಲ್ಲಿ ಉದಹರಿಸಲ್ಪಟ್ಟ ಪರೀಕ್ಷೆಗಳನ್ನು ಕೊಟ್ಟು ತೇರ್ಗಡೆಯಾಗದೇನೆ ಮೇಲ್ಪಟ್ಟ ದರ್ಜೆಗೆ ಬಡ್ತಿಮಾಡಲ್ಪಡುವದಕ್ಕೆ ಅರ್ಹರಾಗಿರತಕ್ಕದ್ದಲ್ಲವು.

1878ನೇ ಇಸವಿ ಅಕ್ಟೋಬರ್ 23ನೇ ಮುಕ್ತಂ ನಂಬರ್ 175.

ಮ್ಯುನೀಫರ ಪರೀಕ್ಷೆ ವಿಷಯದಲ್ಲಿ ಜುಡಿಷಿಯಲ್ ಕಮ್ಮಿಷನರವರಿಗೆ ಬರೆದ 1874ನೇ ಇಸವಿ ಮಾರ್ಚ್ 14ನೇ ಮುಕ್ತಂ ನಂ. 6767—160.

10. ಐದು ವರುಷಗಳಿಗೆ ಕಮ್ಮಿಯಿಲ್ಲದೆ ಸರ್ಕಾರ್ ನವಕರಿಯಲ್ಲಿರುವ ಮತ್ತು ಮಾಹೆಯಾನಾ 35 ರೂಪಾಯಿಗೆ ಕಮ್ಮಿಯಿಲ್ಲದ ತಲಬಿನುಳ್ಳ ನವಕರಿಯನ್ನು ಸರಕಾರದಲ್ಲಿ ಉಂಟುಗಿರುವ ಯಾವ ಮನುಷ್ಯನಾಗಲೀ, ಅವನು ತನ್ನ ಕೆಲಸಗಳನ್ನು ತೃಪ್ತಿಕರವಾಗಿ ಮಾಡಿರುತ್ತಾನೆಂಬ ಬಗ್ಯೆ ತನ್ನ ಮೇಲ್ಪಟ್ಟ ಪುದ್ದೇದಾರರಿಂದ ಸರಟಿಫಿಕೇಟು ಪಡೆದ ಮೇಲೆ, ಮೇಲೆ ಹೇಳಲ್ಪಟ್ಟ ಯಾವ ಪರೀಕ್ಷೆಯನ್ನಾಗಲಿ ಕೊಡುವ ಬಗ್ಯೆ ಅರ್ಜನಾಗಿರತಕ್ಕದ್ದು.

11. ಪರೀಕ್ಷೆ ಕೊಡತಕ್ಕವರು, ಪರೀಕ್ಷೆಗೆ ಯವಡು ತಿಂಗಳಿಗೆ ಮುಂದಾಗಿ, ಪರೀಕ್ಷೆಗೆ ಜರುವ ಬಗ್ಯೆ ಅಪ್ಪಣೆಯಾಗಬೇಕೆಂದು ಬರಹಮೂಲಕ ವಿದ್ಯಾ ಇಲಾಖೆ ಸೆಕ್ರಟೆರಿಯವರಿಗೆ ದರಖಾಸ್ತು ಮಾಡತಕ್ಕದ್ದು. ಸದರೀ ದರಖಾಸ್ತು ಇದರಡೀ ಕಂಡ ನಮೂನೆಯಲ್ಲಿ ಬರೆಯಲ್ಪಟ್ಟು ಮೇಲಿನ ಪ್ಯಾರಾದಲ್ಲಿ ಕಂಡ ಸರ್ಟಿಫಿಕೇಟಿನೊಡನೆ ಪ್ರತಿವೊಂದು ಪರೀಕ್ಷೆಗೂ 25 ರೂಪಾಯಿ ಫೀಜಿನಂತೆ ಆಗುವ ಮೊಬಲಗ ಸಹಿತ ಕಳುಹಿಸಲ್ಪಡತಕ್ಕದ್ದು.

ದರಖಾಸ್ತಿನ ನಮೂನೆ.

ದರಖಾಸ್ತುದಾರನ ಹೆಸರು.	ತಂದೆಯ ಹೆಸರು.	ವಾಸಸ್ಥಳ.	ವಯಸ್ಸು.	ಸಾರವೈಸು ಪುರುಷರ ತಾರೀಖು.	ಹಾಲೀ ಇರತಕ್ಕ ಉದ್ಯೋಗದ ಹೆಸರು	ಸಂಬಳ.	ಯಾವ ಪರೀಕ್ಷೆಗಳಿಗೆ ದರಖಾಸ್ತುದಾರ ಹಾಜರಾಗುವದಕ್ಕೆ ಅಪೇಕ್ಷಿಸುತ್ತಾನೋ ಅವು.	ದರಖಾಸ್ತುದಾರನು ಇದುವರಿಗೆ ಯಾವ ಪರೀಕ್ಷೆಗಳನ್ನಾದರೂ ಕೊಟ್ಟು ತೇರ್ಗಡೆಯಾಗಿದ್ದರೆ ಅವು.

ತಾರೀಖು 3ನೇ ಫಿಬ್ರವರಿ 1885.

ಸಂ. 219.—ಆನೆ ಕೊಂಬುಗಳು ರಾಜಸ್ವತ್ತಾಗಿರುತ್ತೆ; ಮತ್ತು ಸ್ವಾಭಾವಿಕವಾಗಿ ಮರಣ ಹೊಂದುವ, ಯಾ ಸರ್ಕಾರ ಜಾಗಾವಲ್ಲಾಗಲಿ ಸ್ವಂತ ಜಾಗಾದಲ್ಲಾಗಲಿ ಸುಡಲ್ಪಡುವ ತಮೋಂ ಆನೆಗಳ ಕೊಂಬುಗಳೂ ಸರ್ಕಾರಕ್ಕೆ ಶೇರಿದವಾದ್ದರಿಂದ, ಡಿಪ್ಯುಟಿ ಕಮ್ಮಿಷನರುಗಳಿಗೆ ಒಪ್ಪಿಸಲ್ಪಡತಕ್ಕನು; ಸದರೀ ಆಫೀಸರರು ಈ ಬಾಬತು ಸರ್ಕಾರ ಹಕ್ಕನ್ನು ಕಾಪಾಡುವದಕ್ಕೋಸ್ಕರ ಅವರವರ ಡಿಸ್ಟ್ರಿಕ್ಟುಗಳಲ್ಲಿ ಅವಶ್ಯಕವಾದ ಏರ್ಪಾಡುಗಳನ್ನು ಮಾಡತಕ್ಕದ್ದೆಂದು ಇದರಿಂದ ಅಪೇಕ್ಷಿಸಲ್ಪಡುತ್ತಾರೆ.